ದಿನಾಂಕಃ 24-11-2017 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ವಿಚಾರಣೆ ಶ್ರೀಯುತ. ಎನ್ ಎಸ್ ಜಿ ವಕೀಲರಿಂದ ಪ್ರತಿವಾದಿ ನಂ. 1 ಮತ್ತು 11 ರಿಂದ 14 ರ ಪರವಾಗಿ**

ಈ ದಿನ ನಾನು ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ನೀಡಿದ್ದು ಅದರಲ್ಲಿ ಹೇಳಿರುವ ಅಂಶಗಳೆಲ್ಲವು ಸರಿಯಿದ್ದು ಅದನ್ನು ನಾನೇ ಹೇಳಿ ಬರೆಸಿದ್ದು ಅದಕ್ಕೆ ನನ್ನ ಸಹಿ ಕೂಡಾ ಇರುತ್ತದೆ.

ಈ ದಾವೆ ಹಾಕುವ ಮೊದಲು ಮತ್ತು ನಂತರ ನನ್ನ ಮತ್ತು ಇನ್ನುಳಿದ ಪ್ರತಿವಾದಗಳಿಂದ ಭಿನ್ನಾಭಿಪ್ರಾಯ ಇತ್ತು ಎಂದರೆ ಸರಿ. ದಾವಾ ಐಟಂ ನಂ. 1 ನ್ನು ಮಾರಾಟ ಮಾಡಿ ಬಂದ ಹಣವನ್ನು ಪ್ರತಿವಾದಗಳೇ ಹಣದ ರೂಪದಲ್ಲಿ ಕೊಡಿ ಎಂದು ನೀಡಿದ್ದರಿಂದ ಅದನ್ನು ಅವರಿಗೆ ನಗದಾಗಿ ನೀಡಲಾಗಿರುತ್ತದೆ. ಸದರಿ ಹಣವನ್ನು ನಾನು ಒಬ್ಬನೇ ಇಟ್ಟು ಕೊಂಡಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸಿದ ನಂತರ 11 ನೇ ಪ್ರತಿವಾದಿ ಮತ್ತು ಇನ್ನುಳಿದ ಪ್ರತಿವಾದಿಗಳ ಹೆಸರಿನಲ್ಲಿ ಇರತಕ್ಕಂತಹ ಆಸ್ತಿಗಳಿಗೆ ನನ್ನ ಹೆಸರನ್ನು ಹಚ್ಚಲು ನಾನು ಅರ್ಜಿ ನೀಡಿದೆ. ನಾನು 2, 3 ಹಾಗೂ 11 ನೇ ಪ್ರತಿವಾದಿಗಳಿಗೆ ಸಂದಂಭ ಪಟ್ಟಂತೆ ಅವರ ಬ್ಯಾಂಕ ಖಾತೆಗೆ ಹಾಗೂ ವ್ಯವಹಾರಗಳಿಗೆ ಸಂಬಂಧ ಪಟ್ಟಂತೆ, ಸಂಬಂಧಪಟ್ಟ ಇಲಾಖೆಗೆ ತಕರಾರು ಸಲ್ಲಿಸಿಲ್ಲ. ಪ್ರತಿವಾದಿ ನಂ 11 ಮತ್ತು ಇನ್ನುಳಿದ ಪ್ರತಿವಾದಿಗಳಿಗೆ ಅವರವರ ವ್ಯವಹಾರಗಳಲ್ಲಿ ಆದ ಲಾಭದಲ್ಲಿ ಪಾಲನ್ನು ನೀಡುವಂತೆ ನಾನು ನೋಟಿಸು ನೀಡಿಲ್ಲ. ಸದರಿ ವ್ಯವಹಾರಗಳು ಪ್ರತಿವಾದಿಗಳ ವೈಯುಕ್ತಿಕ ವ್ಯವಹಾರ ಆಗಿದ್ದರಿಂದ ನಾನು ಹಾಗೆ ನೋಟಿಸು ನೀಡಿಲ್ಲ ಎಂದರೆ ಸರಿಯಲ್ಲ. 11 ನೇ ಪ್ರತಿವಾದಿ ತನ್ನ ವೈಯಕ್ತಿಕ ನೆಲೆಯಲ್ಲಿ ಬ್ಯಾಂಕಿನಿಂದ ಪಡೆದ ಸಾಲವನ್ನು ಮರುಪಾವತಿಸುತ್ತಿದ್ದಾರೆ ಎಂದರೆ ಸಾಕ್ಷಿ. ಕೂಡಿಕೆ ವ್ಯವಹಾರದಿಂದ ಬಂದ ಆದಾಯದಿಂದ ಮರುಪಾವತಿಸುತ್ತಿದ್ದಾರೆ ಎಂದು ನುಡಿದಿರುತ್ತಾರೆ. ನಾನು ಹಾಗೆ ನನ್ನ ದಾವೆಗೆ ಅನುಕೂಲ ಆಗುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿ ನಂ.11 ಮಾಡಿದ ಸಾಲವನ್ನು ತುಂಬಿಲ್ಲ.

2. 11 ನೇ ಪ್ರತಿವಾದಿ ಪ್ರಶಾಂತ ಲಾಜ ವ್ಯವಹಾರವನ್ನು ಕಳೆದ 3 ವರ್ಷಗಳಿಂದ ಮಾಡುತ್ತಿದ್ದಾರೆ . ಸದರಿ ವ್ಯವಹಾರವನ್ನು 11 ನೇ ಪ್ರತಿವಾದಿ 20 ವರ್ಷಗಳಿಂದ ನಡೆಸುತ್ತಿದ್ದಾರೆ ಎಂದರೆ ಸರಿಯಲ್ಲ. ಕಳೆದ 20 ವರ್ಷಗಳಿಂದ 11 ನೇ ಪ್ರತಿವಾದಿ ಸದರಿ ವ್ಯವಹಾರವನ್ನು ಒಬ್ಬನೇ Managing Partner ಆಗಿ ನಡೆಸುತ್ತಾ ಇದ್ದರೂ ನಾನು ಸುಳ್ಳು ಹೇಳುತ್ತಾ ಇದ್ದೆನೆ ಎಂದರೆ ಸರಿಯಲ್ಲ. ಪ್ರಶಾಂತ ಲಾಜ ನೆಲಮಹಡಿಯಲ್ಲಿ 11 ನೇ ಪ್ರತಿವಾದ 15 ವರ್ಷಗಳಿಂದ ತನ್ನ ಸ್ವಂತ ನೆಲೆಯಲ್ಲಿ ಮೋಬೈಲ್ ವ್ಯವಹಾರ ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ. ಪ್ರಶಾಂತ ಲಾಜ ಕಟ್ಟಡದಲ್ಲಿ ಈ ಮೊದಲು ಮೊಲನೇಯ ಪ್ರತಿವಾದಿ ಐಸ ಕ್ಯಾಂಡಿ ವ್ಯವಹಾರ ಮಾಡುತ್ತಿದ್ದರು ಎಂದರೆ ಸುಳ್ಳು. ಆ ಸಮಯದಲ್ಲಿ ನಾನು ಮತ್ತು ಇನ್ನುಳಿದ ಪ್ರತಿವಾದಿಗಳು ಬಟ್ಟೆ ವ್ಯವಹಾರವನ್ನು ಬೇರೆ ಬೇರೆಯಾಗಿ ಮಾಡುತ್ತಿದ್ದೇವು ಎಂದರೆ ಸರಿಯಲ್ಲ. ನಾನು ಮೊದಲಿದಿಂದಲೂ ಹಾಗೂ ಇನ್ನುಳಿದ ಪ್ರತಿವಾದಿಗಳು ಬೇರೆ ಬೇರೆಯಾಗಿ ವ್ಯವಹಾರ ಮಾಡುತ್ತಾ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 11 ರಿಂದ 14 ನೇ ಪ್ರತಿವಾದಿಗಳು ಆಸ್ತಿ ಮತ್ತು ವ್ಯವಹಾರಗಳಲ್ಲಿ ನನಗೆ ಮತ್ತು ಇನ್ನುಳಿದ ಪ್ರತಿವಾದಿಗಳಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿ ಇಲ್ಲ. 15 ರಿಂದ 17 ನೇ ಪ್ರತಿವಾದಿಗಳ ಹೆಸರಿಗೆ 30 ಲಕ್ಷ ರೂಪಾಯಿ ಠೇವಣಿ ಇದೆ ಎಂದರೆ ಸರಿ. ಸಾಕ್ಷಿ ಅದು LIC ಯಿಂದ ಬಂದ ಹಣ ಎಂದು ನುಡಿದಿರುತ್ತಾರೆ. ನಾನು ಹಾಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಸವರಾಜ ಕುಡಿತದ ಚಟದಿಂದ ತೀರಿಕೊಂಡಿದ್ದಾನೆ ಎಂದರೆ ಸರಿ. ನಾನು ಹಾಗೂ ಪ್ರತಿವಾದಿ ನಂ 10, 15 ರಿಂದ 17, 11 ನೇ ಪ್ರತಿವಾದಿಗೆ ನುಕಸಾನ ಮಾಡುವ ಉದ್ದೇಶದಿಂದ ಈ ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಇನ್ನುಳಿದ ಪ್ರತಿವಾದಿಗಳು ಯಾವತ್ತು ಏಕತ್ರ ಕುಟುಂಬದ ಸದಸ್ಯರಾಗಿಲ್ಲ ಎಂದರೆ ಸರಿಯಲ್ಲ ನನ್ನ Ration Card ನಲ್ಲಿ ನನ್ನ ಹಾಗೂ ನನ್ನ ಹೆಂಡತಿ ಮಕ್ಕಳ ಹೆಸರು ಮಾತ್ರ ಇದೆ ಎಂದರೆ ಸರಿ . ಉಳಿದ ಪ್ರತಿವಾದಿಗಳ Ration Card ಬೇರೆ ಬೇರೆ ಇದೆ ಎಂದರೆ ಸರಿ. ನಾವೆಲ್ಲರೂ ಬೇರೆ ಬೇರೆ ಇದ್ದುದರಿಂದ Ration Card ಬೇರೆ ಬೇರೆ ಇದೆ ಎಂದರೆ ಸರಿಯಲ್ಲ. ನನ್ನ ದಾವೆಯಲ್ಲಿ ತೋರಿಸಿದ ವಂಶಾವಳಿ ಸರಿಯಾಗಿಲ್ಲ ಎಂದರೆ ಸರಿಯಲ್ಲ.

ಪಿ.ಡಬ್ಲ್ಯೂ: 1 ಹಾಜರು

3. ನಾನು ಮತ್ತು ಇನ್ನುಳಿದ ಪ್ರತಿವಾದಿಗಳು ದಾವಾ ಆಸ್ತಿಗಳಲ್ಲಿ ಜಂಟಿ ಕಬ್ಜೆ ಮತ್ತು ಮಾಲಿಕತ್ವ ಹೊಂದಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಐಟಂ ನಂ. 1 ನ್ನು ಬೇಕಾಯ್ದೇಶಿರ ಆಗಿ ದಾವೆ ಸಲ್ಲಿಸಿದ ನಂತರ ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ ನಂ. 6 ಮತ್ತು 7 ಮೊದಲನೇ ಪ್ರತಿವಾದಿ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸದರಿ ಆಸ್ತಿಗಳು ಮೊದಲನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳಾಗಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸುಳ್ಳು. ಸದರಿ ಆಸ್ತಿಗಳು ಹಿರಿಯರ ಆಸ್ತಿಗಳು ಎಂದು ತೋರಿಸಲು ನಾನು ದಾಖಲಾತಿ ಹಾಜರು ಮಾಡಿಲ್ಲ. 1 ನೇ ಪ್ರತಿವಾದಿ ಸದರಿ ಆಸ್ತಿಯಲ್ಲಿ 11 ನೇ ಪ್ರತಿವಾದಿಯ ಸಹಾಯದಿಂದ ಬ್ಯಾಂಕನಿಂದ ಸಾಲ ಪಡೆದು ಪ್ರಶಾಂತ ಲಾಜ ಕಟ್ಟಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ಕಟ್ಟಡವನ್ನು 1 ಮತ್ತು 11 ನೇ ಪ್ರತಿವಾದಿಗಳು ವೈಯಕ್ತಿಕವಾಗಿ ಕಟ್ಟಿಸಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಗೆ ಸಂಬಂಧಪಟ್ಟಂತೆ 11 ನೇ ಪ್ರತಿವಾದಿ ಮಾತ್ರ ಮಾಲೀಕ ಎಂದರೆ ಸರಿಯಲ್ಲ . 11 ರಿಂದ 14 ಪ್ರತಿವಾದಿಗೆ ವೈಯಕ್ತಿಕ ಆಸ್ತಿಯನ್ನು ಹೊಡೆದುಕೊಳ್ಳುವ ಮತ್ತು ನುಕಸಾನ ಉದ್ದೇಶದಿಂದ ನಾನು ಹಾಗೂ 15 ರಿಂದ 17 ನೇ ಪ್ರತಿವಾದಿಗಳು ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸುಳ್ಳು. ಅವರುಗಳಿಗೆ ತೊಂದರೆ ನೀಡುವ ಉದ್ದೇಶದಿಂದ ನಾನು ಖೊಟ್ಟಿ ದಾಖಲಾತಿ ಆಧಾರ ಮೇಲೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ.

(ಸತೀಶ ಜೆ.ಬಾಳಿ)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ